**ದಿನಾಂಕಃ 06-01-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 1,2,4,6 ರಿಂದ 8 ನೇ ಪ್ರತಿವಾದಿಗಳ ಪರ ಶ್ರೀ ಬಿ ಹೆಚ್ ಬಿ ವಕೀಲರಿಂದಃ**

ಐರಣಿ ಗ್ರಾಮದ ದಾವೆ ಸರ್ವೆ ನಂ.92/1ಎ ಕ್ಷೇತ್ರ 5 ಎಕರೆ 12 ಗುಂಟೆ ನಮ್ಮ ಕುಟುಂಬಕ್ಕೆ ಸಂಬಂದಪಟ್ಟಿದ್ದು ಅಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯು ಬಜಾರಿ ಕಮಲಮ್ಮ ಕೋಂ ಹನುಮಂತಪ್ಪ ಹಾಗೂ ಅವರ ಕುಟುಂಬದವರಿಗೆ ಸೇರಿದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗಳ ಸಂಖ್ಯೆ ಮತ್ತು ವಿಸ್ತೀರ್ಣ, ಚೆಕ್ಕು ಬಂದಿಯನ್ನು ಹೇಳಲು ಬರುವುದಿಲ್ಲ. ನಾನು ದಾವಾ ಹಾಕುವ ಕಾಲಕ್ಕೆ ನಮ್ಮ ಅತ್ತೆ ನಿಂಗಮ್ಮ ನದಿಹರಳಹಳ್ಳಿಯಲ್ಲಿದ್ದರು. ಅಜ್ಜಿ ರಾಣೇಬೆನ್ನೂರಿನಲ್ಲಿದ್ದರು. ದಾವಾ ಹಾಕುವ ಕಾಲಕ್ಕೆ ನನ್ನ ಅಜ್ಜಿ ಜೀವಂತವಿದ್ದರೂ ಮೃತಪಟ್ಟಿದ್ದಾಳೆ ಎಂದು ಸುಳ್ಳು ಹೇಳಿದ್ದೀರಿ ಎಂದರೆ ತಪ್ಪಾಗಿ ಪ್ರಿಂಟ್ ಆಗಿರುತ್ತದೆ ಎಂದು ಹೇಳುತ್ತಾರೆ. ಅತ್ತೆಯನ್ನು ಪಕ್ಷಗಾರರನ್ನಾಗಿ ಕಾಣಿಸಿಲ್ಲ ಎಂದರೆ ಆಮೇಲೆ ದಾವೆಯಲ್ಲಿ ಸೇರಿಸಿರುತ್ತೇವೆ ಎಂದು ಸಾಕ್ಷಿ ನುಡಿಯುತ್ತಾರೆ. ಅವರ ಪಾಲನ್ನು ಕಬಳಿಸಬೇಕೆಂಬ ಉದ್ದೇಶದಿಂದ ದಾವಾ ಹಾಕುವ ಕಾಲಕ್ಕೆ ಅವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಕಾಣಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಅಜ್ಜ ಬೀಮಪ್ಪ ಬಜಾರಿ ರವರ ಆಸ್ತಿಯಲ್ಲಿ ಅತ್ತೆ ನಿಂಗಮ್ಮ ಮತ್ತು ಅಜ್ಜಿ ಕೆಂಚಮ್ಮ ರವರಿಗೂ ಪಾಲು ಇರುತ್ತದೆ ಎಂದರೆ ಸರಿ. 1991 ರಲ್ಲಿ ಅಂದರೆ ನಮ್ಮ ಅಜ್ಜ ತೀರಿಕೊಂಡ ನಂತರ ಅವನ ಗಂಡು ಮಕ್ಕಳ ಮಧ್ಯ ಆಸ್ತಿ ವಿಭಾಗ ಮಾಡಿಕೊಂಡಿದ್ದು ಮನೆಯ ಸ್ವತ್ತು ನಮ್ಮ ತಂದೆಗೆ ಬಂದಿರುತ್ತದೆ ಎಂದರೆ ಸರಿ. ಸದರಿ ಆಸ್ತಿ ಈಗ ಬೀಳು ಬಿದ್ದಿದೆ ಎಂದರೆ ಸಾಕ್ಷಿಯೂ ಸದರಿ ಆಸ್ತಿಯನ್ನು ನಮ್ಮ ಚಿಕ್ಕಪ್ಪ ಮೋಸದಿಂದ ತಾವೇ ಮನೆ ಕಟ್ಟಿಸಿಕೊಂಡು ವಾಸವಾಗಿದ್ದಾರೆ. ಸದರಿ ಮನೆಯಲ್ಲಿ ಅವರು ಕಳೆದ 7-8 ವರ್ಷಗಳಿಂದ ವಾಸವಾಗಿದ್ದಾರೆ. ಸದರಿಯವರಿಗೆ ತಾವು ಏಕೆ ವಾಸವಾಗಿದ್ದೀರಿ ಎಂದು ಅವರಿಗೆ ಪ್ರಶ್ನಿಸಿದ್ದೀರಾ ಎಂದರೆ ನಾವು ಕೇಳಿಲ್ಲ ಎಂದು ನುಡಿಯುತ್ತಾರೆ. ಅವರು ಮನೆ ಕಟ್ಟಿದ ನಂತರ ನಮ್ಮ ತಂದೆ ಆ ವಿಷಯವನ್ನು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಮನೆ ಕಟ್ಟಿದ್ದಕ್ಕಾಗಿ ಅವರಿಗೆ ತಕರಾರು ಮಾಡಿದ್ದೀರಾ ಎಂದರೆ ತಕರಾರು ಮಾಡಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ವಾಸವಾಗಿರುವ ಮನೆ ನಂಬರು ನನಗೆ ಗೊತ್ತಿಲ್ಲ. ಆ ಮನೆಯ ಪೂರ್ವಕ್ಕೆ ಹನುಮಂತಪ್ಪ ಮನೆ, ಪಶ್ಚಿಮಕ್ಕೆ ಕೊಟಿಗೆ ಗೌಡ್ರ ರವರ ಮನೆ, ಉತ್ತರಕ್ಕೆ ಬಸವರಾಜ ಪಾಟೀಲ ರವರ ಮನೆ, ದಕ್ಷಿಣಕ್ಕೆ ಪರಮೇಶಪ್ಪ ಬಜಾರಿ ರವರ ಮನೆ ಇದೆ. ನಮ್ಮ ತಾಯಿ ಸದರಿ ಮನೆಯಲ್ಲಿ ವಾಸವಾಗಿದ್ದಾರೆ ಎಂದು ತೋರಿಸಲು ಉತಾರವನ್ನು ಹಾಜರುಪಡಿಸಲು ತೊಂದರೆ ಇತ್ತೇ ಎಂದರೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಹಾಗೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಮ್ಮ ಅಪಘಾತದಲ್ಲಿ ತೀರಿಕೊಂಡ ನಂತರ ಅಪಘಾತದ ಪರಿಹಾರದ ಹಣವನ್ನು

ನಾವೇ ನಮ್ಮ ಸ್ವಂತಕ್ಕೆ ಪಡೆದುಕೊಂಡು ನಮ್ಮ ತಂದೆಗೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ನಾವೇಲ್ಲರೂ ಸೇರಿಕೊಂಡು ನಮ್ಮ ತಂದೆಗೆ ಪರಿಹಾರದ ಹಣವನ್ನು ಕೊಟ್ಟಿಲ್ಲ ಅವರನ್ನು ಸರಿಯಾಗಿ ನೋಡಿಕೊಳ್ಳದೇ ಅನಾಥರಾಗಿ ಬಿಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯೂ ಸ್ವ ಇಚ್ಛೆಯಿಂದ ನಮ್ಮ ತಂದೆಯ ತಮ್ಮಂದಿರು ನನ್ನ ತಂದೆಯನ್ನು ಮನೆಯಿಂದ ಹೊರಗೆ ಹಾಕಿದ್ದು ದಾವೆಯನ್ನು ಮಾಡೋಣವೆಂದು ನಮ್ಮ ತಂದೆ ನಮಗೆ ಹೇಳಿದ್ದರು ಎಂದು ಹೇಳುತ್ತಾರೆ. ಹಾಗಿದ್ದರೇ ನಿಮ್ಮ ತಂದೆಯ ವಿರುದ್ಧ ನೀವೇಕೆ ದಾವೆ ಸಲ್ಲಿಸಿದ್ದೀರಿ ಎಂದು ವಕೀಲರು ಕೇಳಿದ ಪ್ರಶ್ನೆಗೆ ಸಾಕ್ಷಿಯೂ ನೀನು ನಿಮ್ಮ ತಮ್ಮನಿಗೆ ಆಸ್ತಿಯನ್ನು ಬರೆದುಕೊಟ್ಟು ಬಂದಿದ್ದೀರಿ ನಾವೇ ದಾವೆಯನ್ನು ಮಾಡುತ್ತೇವೆ ಎಂದು ಹೇಳಿದ್ದೇವು ಎಂದು ನುಡಿಯುತ್ತಾರೆ. ನನ್ನ ತಂದೆ ಹಾಗೆ ಹೇಳಿದ್ದೆ ಇಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯವರು ತನ್ನ ಸಹೋದರರ ಆಶ್ರಯದಲ್ಲಿ ಹಾಗೂ ಅವರ ಸಹಕಾರದಿಂದ ಅವರು ಇವತ್ತಿನವರೆಗೂ ಜೀವನ ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಎರಡನೇ ಪ್ರತಿವಾದಿ ನನ್ನ ಚಿಕ್ಕಪ್ಪನ ಮನೆಯಲ್ಲಿ ಊಟ ಮಾಡುತ್ತಾ ವಾಸವಾಗಿದ್ದಾರೆ ಎಂದರೆ ಸರಿ. ಮುಂದುವರೆದು ಸಾಕ್ಷಿಯೂ ಅವರೇ ಆಸ್ತಿಯನ್ನು ಬರೆಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ನಮ್ಮ ತಂದೆಯವರು ಮಕ್ಕಳ ವಿದ್ಯಾಭ್ಯಾಸದ ಖರ್ಚಿಗಾಗಿ ನಮ್ಮ ಚಿಕ್ಕಪ್ಪನವರಿಗೆ 1991 ರವರಿಗೆ ಬಿಟ್ಟು ಕೊಟ್ಟಿದ್ದು ಆದಾಗಿನಿಂದಲೇ ನಮ್ಮ ಚಿಕ್ಕಪ್ಪನವರು ಸದರಿ ಆಸ್ತಿಯ ಕಬ್ಜಾವನ್ನು ಅಭಿವೃದ್ದಿಪಡಿಸಿದ್ದಾರೆ ಎಂದರೆ ಸರಿಯಲ್ಲ.

ಸರ್ವೆ ನಂ.21/3 ಕ್ಷೇತ್ರ 4 ಎಕರೆ 33 ಗುಂಟೆ ತಲಾ ಒಂದೋಂದು ಎಕರೆ ಗಂಡು ಮಕ್ಕಳಿಗೆ ಬಂದಿದ್ದು , 33 ಗುಂಟೆ ನನ್ನ ಅಜ್ಜಿ ಕೆಂಚಮ್ಮನಿಗೆ ಬಂದಿರುತ್ತದೆ ಎಂದರೆ ಸರಿ. ನಮ್ಮ ತಂದೆಯವರಿಗೆ ಬಂದ ಒಂದು ಎಕರೆ ಹೊಲವನ್ನು ಹನುಮಂತಪ್ಪ ಬಜಾರಿ ರವರೇ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಸದರಿ 1 ಎಕರೆ ಹೊಲವನ್ನು ನಮ್ಮ ತಾಯಿ ಮತ್ತು ನಾವೇಲ್ಲರೂ ಸೇರಿಕೊಂಡು 10 ಅಡಿ ಆಳದ ಮಣ್ಣನ್ನು ಮಾರಾಟ ಮಾಡಿಕೊಂಡು ದುಡ್ಡು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಮಣ್ಣನ್ನು ಮುತ್ತುರಾಜ ಬಾಸಿಂಗದ ರವರಿಗೆ ಮತ್ತು ಅದೇ ಗ್ರಾಮದ ಕೋಟೆಗೌಡ ಹನುಮಂತಪ್ಪನ ಮಕ್ಕಳಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ಆ ಕಾರಣ ಸದರಿ ಜಮೀನು 10 ಅಡಿ ಆಳ ಬಿದ್ದಿದ್ದರಿಂದ ವ್ಯವಸಾಯಕ್ಕೆ ಯೋಗ್ಯವಲ್ಲ ಎಂದರೆ ಸರಿಯಲ್ಲ. ಸದರಿ ಜಮೀನನ್ನು ನಮ್ಮ ಚಿಕ್ಕಪ್ಪ ರವರು ಸಾಗುವಳಿ ಮಾಡಿಕೊಂಡು ಬಂದಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗಳ ಚೆಕ್ಕು ಬಂದಿ , ವಿಸ್ತೀರ್ಣವಾಗಲೀ , ಕುಟುಂಬದ ಸದಸ್ಯರ ಬಗ್ಗೆ ಗೊತ್ತಿಲ್ಲ ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಐರಣಿ ಗ್ರಾಮದ ಸರ್ವೆ ನಂ.95/5 ಬ 1 ಎಕರೆ 25 ಗುಂಟೆ ಜಮೀನನ್ನು ದಿನಾಂಕ 03.06.2022

ರಂದು ನೊಂದಾಯಿತ ಖರೀದಿ ಪತ್ರದ ಮೂಲಕ 2 ನೇ ಪ್ರತಿವಾದಿಯಿಂದ 1 ನೇ ಪ್ರತಿವಾದಿಗೆ ಖರೀದಿ ಬರೆಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ರೂ. 5,85,000/- ರೂಗಳನ್ನು ಖರೀದಿಯ ಮೊತ್ತವನ್ನು ಚೆಕ್ ಮೂಲಕ 1 ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ಚೆಕ್ಕು ನಂಬರು 589336 ಸ್ಟೇಟ್ ಬ್ಯಾಂಕ ಆಪ್ ಇಂಡಿಯಾ ದಾವಣಗೆರೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯೂ ಮುಂದುವರೆದು ನನ್ನ ತಾಯಿಗೆ ಹಾಗೂ ನನಗೆ ಆ ಹಣವನ್ನು ಏಕೆ ಕೊಟ್ಟಿರುವುದಿಲ್ಲ ಎಂದು ಪ್ರಶ್ನಿಸಿದ್ದಾರೆ. ಆ ಖರೀದಿ ಸುಳ್ಳು ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಖರೀದಿ ಮೋಸವಾಗಿದೆ ಎಂದು ನನ್ನ ಚಿಕ್ಕಪ್ಪನ ವಿರುದ್ದ ದೂರು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಗೊತ್ತಾದ ನಂತರ ಈ ದಾವೆ ಮಾಡಿದ್ದೇವೆ ಎಂದು ನುಡಿಯುತ್ತಾರೆ. ಸರ್ವೆ ನಂ.92/1 ವಿಸ್ತೀರ್ಣ 5 ಎಕರೆ 11 ಗುಂಟೆ , 92/2 ವಿಸ್ತೀರ್ಣ 6 ಎಕರೆ 21 ಗುಂಟೆ ಆಸ್ತಿಗಳಲ್ಲಿ ನಮ್ಮ ಕುಟುಂಬಕ್ಕೆ ಸಂಬಂದಪಟ್ಟ ಆಸ್ತಿ ಯಾವುದು ಎಂದರೆ ಸರ್ವೆ ನಂ.92/1 ವಿಸ್ತೀರ್ಣ 5 ಎಕರೆ 11 ಗುಂಟೆಯದ್ದಾಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಹಾಗೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿ ನಮ್ಮ ಕುಟುಂಬಕ್ಕೆ ಸಂಬಂದಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿ ನಮ್ಮ ಕುಟುಂಬಕ್ಕೆ ಸಂಬಂದಪಟ್ಟದ್ದಾಗಿಲ್ಲದ ಕಾರಣ ಸದರಿ ಆಸ್ತಿಯ ಮೇಲೆ ದಾವೆ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾವು ವಾದಿಗಳೆಲ್ಲರೂ ನಮಗೆ ಸೇರಿದ ಅಂದರೆ 10 ಅಡಿ ಮಣ್ಣು ತೆಗೆದ ಜಮೀನನ್ನು 2 ನೇ ಪ್ರತಿವಾದಿಗೆ ತೆಗೆದುಕೊಳ್ಳಿ ಎಂದು ಹೇಳಿದ್ದೇವು ಎಂದರೆ ಸರಿಯಲ್ಲ. ಆಗ ನನ್ನ ಚಿಕ್ಕಪ್ಪನವರು ಪಿತ್ರಾರ್ಜಿತ ಆಸ್ತಿ ಇರಬೇಕು ಮುಂದೆ ಹಿರಿಯರ ಶವ ಸಂಸ್ಕಾರಕ್ಕೆ ಬೇಕಾಗುತ್ತದೆ ಎಂದು ಬುದ್ದಿವಾದ ಹೇಳಿದ್ದಕ್ಕೆ ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಸಂಬಂಪಟ್ಟ ನದಿಹರಳಹಳ್ಳಿ ಗ್ರಾಮದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾವಾಗಲೀ ನಮ್ಮ ತಂದೆಯವರಾಗಲೀ ಸದರಿ ಗ್ರಾಮದಲ್ಲಿ ಮನೆ ಕಟ್ಟಿಲ್ಲ ವಾಸವಾಗಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಖರೀದಿ ಹಣವನ್ನು ನಮ್ಮ ತಂದೆಗೆ ನೇರವಾಗಿ ಕೊಟ್ಟಿದ್ದು ನಮಗೆ ಕೊಡದೇ ಇರುವುದರಿಂದ ಅವರ ವಿರುದ್ದ ಸುಳ್ಳು ದಾವೆಯನ್ನು ಹಾಕಿದ್ದೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 5 ನೇ ಪ್ರತಿವಾದಿಯ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.